ಅಫೀನರು ಮತ್ತು ಪ್ರೊಸಿಡೆಂಟರಿಗೆ ಡೈರೆಕ್ಷನ್ ಕೊಡುವುದರಲ್ಲಿ ಅರ್ಥವಿಲ್ಲ. ಆದ್ದರಿಂದ ಬೇರೆ ಯಾರಾದರೂ ಡಿವಿಜನರ್ ಕಮೀಷನರನ್ನಾಗಲೀ ಅಥವಾ ಬೇರೆ ಜಿಲ್ಲಾಧಿಕಾರಿಗಳನ್ನಾಗಲೀ ನೇಮಿಸಿ ಅವುಗಳನ್ನು ಕೂಲಂಕಷವಾಗಿ ವಿಚಾರಣೆ ಮಾಡುವುದಕ್ಕೆ ಸಾಧ್ಯವಿದೆಯೇ ?

ಶ್ರೀ ಆರ್. ಎಂ. ಪಾಟೀರ್.—ಈಗ ಅದರ ಬಗ್ಗೆ ರಿಪೋರ್ಟ್ ಬಂದಿದೆ. ಇನ್ನುಮುಂದೆ ಯಾವ ಯಾವ ಕೆಲಸಕ್ಕೆ ಯಾವ ಯಾವ ಕ್ರಮ ತೆಗೆದುಕೊಳ್ಳಬೇಕೆಂಬುದನ್ನು ವಿಚಾರ ಮಾಡುತ್ತೇವೆ.

Basic Training Institute Examination.

*Q.—187. Sri V. S. LAKSHMIKANTHAPPA (Sagar).—

Will the Government be pleased to state :—

(*a*) the number of candidates who appeared for the examinations through the Government Basic Training Institute, Anavatti, in Shimoga District during the year 1964–1965 (the number of candidates deputed by Government and the number of candidates appeared privately may be furnished separately) ;

(*b*) the date on which the results were announced ;

(*c*) the number of candidates whose results were withheld and the reasons thereof ;

(*d*) when the Assessment Committee visited the Institute and the date of finalisation of year's work of the candidates in the said Institute during 1964–65 ;

(*e*) the number of quarterly examinations conducted during 1964–1965 ?

A.—Sri S. R. KANTHI (Minister for Education).—

(*a*) Number deputed by Government : 15
Private candidates : 79

(*b*) 31st October 1965.

(*c*) 21. Because they failed in the year's work under Group III (Crafts).

(*d*) The Assessment Committee visited the Institute on 28th February 1965. The annual Class Examination in Agriculture both in theory and practical was held on 17th, 18th and 19th March 1965.

(*e*) Nil.

ಶ್ರೀ ಎ. ಎನ್. ಲಕ್ಷ್ಮೀಕಾಂತಪ್ಪ.—ಸ್ವಾಮಿ, ನನ್ನ ಪ್ರಶ್ನೆಗೆ ಉತ್ತರವಾಗಿ ಶಿವಮೊಗ್ಗ ಜಿಲ್ಲೆಯ ಅನವಟ್ಟಿಯಲ್ಲಿರುವ ಸರ್ಕಾರಿ ಮೂಲಶಿಕ್ಷಣ ಸಂಸ್ಥೆಯ ಮೂಲಕ ಪರೀಕ್ಷೆಗೆ ಕುಳಿತುಕೊಂಡಿದ್ದ ವಿದ್ಯಾರ್ಥಿಗಳ ಪೈಕಿ ಸರ್ಕಾರದವರು ಕಳುಹಿಸಿಕೊಟ್ಟಿದ್ದ ವಿದ್ಯಾರ್ಥಿಗಳ ಸಂಖ್ಯೆ 15 ಮತ್ತು ಖಾಸಗೀ ವಿದ್ಯಾರ್ಥಿಗಳ ಸಂಖ್ಯೆ 79 ಎಂದು ಹೇಳಿದ್ದೀರಿ. ಅದರಲ್ಲಿ 21 ಜನ ವಿದ್ಯಾರ್ಥಿಗಳಿಗೆ ಮೂರನೆಯ ಭಾಗ (ಕುಶಲಕರ್ಮ)ಕ್ಕೆ ಸಂಬಂಧಪಟ್ಟಂತೆ ಆ ವರ್ಷದಲ್ಲಿ ಮಾಡಬೇಕಾಗಿದ್ದ ನಿರ್ದಿಷ್ಟ ಕೆಲಸವನ್ನು ಮಾಡದೇ ಇರುವುದರಿಂದ ಅವರು ಆ ಪರೀಕ್ಷೆಗೆ ಕುಳಿತುಕೊಳ್ಳುವುದಕ್ಕೆ ಅವಕಾಶ ಸಿಕ್ಕದೆ ಇರುವುದರಿಂದ ಅವರು ಪರೀಕ್ಷೆಯಲ್ಲಿ ಪಾಸಾಗುವುದಕ್ಕೆ ಸಾಧ್ಯವಾಗಲಿಲ್ಲ. ಈ ರೀತಿ ಆ 21 ಜನ ವಿದ್ಯಾರ್ಥಿಗಳಿಗೆ ಅನ್ಯಾಯವಾಗುವುದಕ್ಕೆ ಕಾರಣವೇನು ?

†ಶ್ರೀ ಎಸ್. ಆರ್. ಕಂಠಿ.—ಮಾನ್ಯ ಸದಸ್ಯರು ಹೇಳುವುದು ಸರಿಯಲ್ಲ. ಆ ವಿದ್ಯಾರ್ಥಿಗಳು ಆ ವರ್ಷದಲ್ಲಿ ಮಾಡಬೇಕಾಗಿದ್ದ ನಿರ್ದಿಷ್ಟ ಕೆಲಸವನ್ನು ಮಾಡಿದ್ದಕ್ಕೋಸ್ಕರ ಅದರಲ್ಲಿ ಅವರು ತೇರ್ಗಡೆ ಹೊಂದಬೇಕಾಗುತ್ತದೆ. ಆದ್ದರಿಂದ ಆ ವಿದ್ಯಾರ್ಥಿಗಳ ಪರೀಕ್ಷೆಯ ಫಲತಾಂಶವನ್ನು ತಡೆಹಿಡಿಯಲಾಗಿದೆ. ಆ ವಿದ್ಯಾರ್ಥಿಗಳಿಗೆ ಸಂಬಂಧಪಟ್ಟ ಶಾಲೆಗಳಿಂದ ಇಯರ್ಸ್ ವರ್ಕ್ ಸರ್ಟಿಫಿಕೇಟ್ ಬಗ್ಗೆ ವರದಿ ಬಂದು ಮೂರು ತಿಂಗಳಾದಮೇಲೆ ಆ ವಿದ್ಯಾರ್ಥಿಗಳ ಪರೀಕ್ಷೆಯ ಫಲತಾಂಶವನ್ನು ಹೇಳುತ್ತಾರೆ.

ಶ್ರೀ ವಿ. ಎಸ್. ಲಕ್ಷ್ಮೀಕಾಂತಪ್ಪ.—ಆ ಪರೀಕ್ಷೆಗೆ ಕುಳಿತುಕೊಳ್ಳುವುದಕ್ಕೆ ಮುಂಚೆ ಇಯರ್ಸ್ ವರ್ಕ್‌ನಲ್ಲಿ ಪಾಸಾದ ಹೊರತು ಪರೀಕ್ಷೆಗೆ ಕುಳಿತುಕೊಳ್ಳುವುದಕ್ಕೆ ಅವಕಾಶವಿಲ್ಲ ಎಂದು ಸ್ಪೆಸಿಫಿಕ್ ಆಗಿ ಸಿಲಬಸ್‌ನಲ್ಲಿ ಡೈರೆಕ್ಷನ್ ಇಲ್ಲ, ಅಲ್ಲವೇ?

ಶ್ರೀ ಎಸ್. ಆರ್. ಕಂಠಿ.—ಹಾಗಿಲ್ಲ.

2-00 P.M.

ಶ್ರೀ ವಿ. ಎಸ್. ಲಕ್ಷ್ಮೀಕಾಂತಪ್ಪ.—ಮಾರ್ಚ್ ತಿಂಗಳಿನಲ್ಲಿ ಪರೀಕ್ಷೆಯಾಗಿದ್ದರೂ ಕೂಡ ಇದರ ಫಲತಾಂಶ ಪ್ರಕಟಣೆಯನ್ನು 31-10-1965 ರಲ್ಲಿ ಪ್ರಕಟಮಾಡಿದರು. ಇಷ್ಟು ತಡವಾಗಿ ಪ್ರಕಟಣೆ ಮಾಡಲು ಇದ್ದಂತಹ ಕಾರಣಗಳಾದರೂ ಏನು?

Sri S. R. KANTHI.—Usually what happens is that the result is announced after 2 months of the examination. But unfortunately in this case it was announced on 31st October, 1965. The delay was due to the fact that the Principal of the Training College delayed in sending the completion report.

ಶ್ರೀ ವಿ. ಎಸ್. ಲಕ್ಷ್ಮೀಕಾಂತಪ್ಪ.—ಇಲ್ಲಿ ನಡೆದಂತಹ ಪರೀಕ್ಷೆಗಳ ಬಗೆಗೆ ಸರಕಾರಕ್ಕೆ ಏನಾದರೂ ದೂರುಗಳು ಬಂದಿದ್ದವೇ?

Sri S. R. KANTHI.—I have not received any complaints in this respect, but the D.P.I seems to have received some complaints and that is being enquired into. There is an Agricultural Inspector in that college who has been responsible to some extent for this. The D.P.I. is making enquiries against him.

Mr. SPEAKER.—Question Hour is over.

QUESTION FOR ANSWERS ON THE DAY

(but not taken up)

Development of Railways in the State.

*Q.—87 Sri B. L. GOWDA (Challakere)—

Will the Government be pleased to state:—

(*a*) whether the State Government have submitted any plans to the Centre for development of Railways in Mysore State in the Fourth Five-Year Plan;

(*b*) if so, what are the routes proposed;

(*c*) whether any preliminary survey has been ordered?